**O.S. 282-17 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ S R A, ವಕೀಲರಿಂದಃ**

12. ನನ್ನ ಗಂಡ ರಿಯಲ್ ಎಸ್ಟೇಟ ಹಾಗೂ ಟ್ರಕ್ ವ್ಯವಹಾರ ಮಾಡುವ ಬಗ್ಗೆ ಮತ್ತು ಉತ್ಪನ್ನದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ ಅಂದರೆ ಸರಿ. ಜಂಟಿ ಕುಟುಂಬದ ಆದಾಯ ಬಿಟ್ಟರೆ ನನ್ನ ಗಂಡನಿಗೆ ಸ್ವಂತ ಆದಾಯವಿರಲಿಲ್ಲ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಕೌಂಟರ ಕ್ಲೇಮ ಓದಿ ತಿಳಿದುಕೊಂಡಿದ್ದೇನೆ. ನನ್ನ ಹಾಗೂ ನನ್ನ ಗಂಡನ ಹೆಸರಿನಲ್ಲಿರುವ ಆಸ್ತಿಗಳಲ್ಲಿ 4 ನೇ ಪ್ರತಿವಾದಿಗೆ ಹಕ್ಕು ಇದೆ ಅಂದರೆ ಸರಿಯಲ್ಲ. ಅದರಲ್ಲಿ ನಾವು ಪಾಲು ಕೊಡಬೇಕಾಗುತ್ತದೆ ಅಂದರೆ ಸರಿಯಲ್ಲ. ಕೌಂಟರ ಕ್ಲೇಮ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಅಂದರೆ ಸರಿಯಲ್ಲ. ನಾನು ನಿಪಿ.30 ಬ್ಯಾಂಕ ಸ್ಟೇಟಮೆಂಟ ಹಾಜರಪಡಿಸಿದ್ದೇನೆ. ನಿಪಿ.30 ನಾಗರಾತ್ನ, ಪ್ರಕಾಶ, ರಾಜೇಶ್ವರಿ ಶೆಟ್ಟರ ರವರ ಹೆಸರಿನಲ್ಲಿ ಖಾತೆ ಇದೆ ಅಂದರೆ ಸರಿ. ನನ್ನ ಗಂಡನ ಹೆಸರು ಅದರಲ್ಲಿದೆ ಅಂದರೆ ಸರಿ. ನಿಪಿ.30 ರಲ್ಲಿ 10 ಲಕ್ಷ ರೂ. ಡೆಬಟ್ ಆದ ಬಗ್ಗೆ ನಮೂದು ಇದೆ ಅಂದರೆ ಸರಿ. ನಿಪಿ.30 ಬ್ಯಾಂಕ ಸ್ಟೇಟಮೆಂಟ ಎಷ್ಟು ಸಿಕ್ಕಿದೆ ಅಷ್ಟು ಹಾಜರಪಡಿಸಿದ್ದೇವೆ. ನಿಪಿ.30 ನ್ನು ನಾನೇ ತೆಗೆದುಕೊಂಡಿದ್ದೇನೆ. ನಾನು ಬ್ಯಾಂಕಗೆ ಹೋಗಿ ಸ್ಟೇಟಮೆಂಟ ಕೇಳಿದೆನು, ಅವರು ನಿಪಿ.30 ನ್ನು ತೆಗೆದುಕೊಟ್ಟರು, ಮುಂದಿನದು ಗೊತ್ತಿಲ್ಲ. ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಸ್ಟೇಟಮೆಂಟ ಕೊಡಿ ಅಂತಾ ನಾನು ಕೇಳಿಲ್ಲ. ಮುಂದಿನ ದಿನಗಳ ಬ್ಯಾಂಕ ಸ್ಟೇಟಮೆಂಟ ನಮಗೆ ವಿರುದ್ಧವಾಗುತ್ತದೆ ಎಂದು ಕೇಳಿಲ್ಲ ಹಾಗೂ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಪ್ರತಿ ವಾದಿ -4 ಹಾಗೂ 9 ರವರು ಖರೀದಿ ಹಣವನ್ನು ಜಂಟಿಯಾಗಿ ಅವರ ಖಾತೆಯಿಂದ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿ ದಿಃ 01.12.2015 ರಂದು 10 ಲಕ್ಷ ರೂ. ಗಳನ್ನು ನಿಪಿ.30 ಕ್ಕೆ ತಮ್ಮ ಎಸ್ ಬಿ ಐ ಖಾತೆಯಿಂದ ವರ್ಗಾವಣೆ ಮಾಡಿದ್ದಾರೆ ಅಂದರೆ, ಮಾಹಿತಿ ಇಲ್ಲ. ಅದೇ ರೀತಿ ದಿಃ 15.3.2015 ರಂದು 4 ಲಕ್ಷ ರೂ. ಹಣವನ್ನು ವರ್ಗಾವಣೆ ಮಾಡಿದ್ದಾರೆ ಅಂದರೆ, ಮಾಡಿರಬಹುದು. ಅದೇ ರೀತಿ ದಿಃ 10.04.2015 ರಂದು 12 ಲಕ್ಷ ರೂ. ಹಣವನ್ನು ವರ್ಗಾವಣೆ ಮಾಡಿದ್ದಾರೆ ಅಂದರೆ, ಮಾಡಿರಬಹುದು. ಅದೇ ರೀತಿ ದಿಃ 25.4.2015 ರಂದು 50 ಸಾವಿರ ರೂ. ಹಣವನ್ನು ವರ್ಗಾವಣೆ ಮಾಡಿದ್ದಾರೆ ಅಂದರೆ, ಮಾಡಿರಬಹುದು.

**O.S. 282-17 PW : 1**

ಅದೇ ರೀತಿ ದಿಃ 12.5.2015 ರಂದು 2 ಲಕ್ಷ ರೂ. ಹಣವನ್ನು ವರ್ಗಾವಣೆ ಮಾಡಿದ್ದಾರೆ ಅಂದರೆ, ಮಾಡಿರಬಹುದು. ಅದೇ ರೀತಿ ದಿಃ 01.10.2015 ರಂದು 30 ಸಾವಿರ ಹಾಗೂ 20 ಸಾವಿರ ರೂ. ಹಣವನ್ನು ವರ್ಗಾವಣೆ ಮಾಡಿದ್ದಾರೆ ಅಂದರೆ, ಮಾಡಿರಬಹುದು. ಒಟ್ಟು 29 ಲಕ್ಷ ರೂ.ಗಳನ್ನು 4 ನೇ ಪ್ರತಿವಾದಿ ನಿಪಿ.30 ಕ್ಕೆ ವರ್ಗಾವಣೆ ಮಾಡಿದ್ದಾರೆ ಅಂದರೆ, ಮಾಡಿರಬಹುದು. 4 ನೇ ಪ್ರತಿವಾದಿ ಹಾಗೂ ಅವರ ಗಂಡ 9 ನೇ ಪ್ರತಿವಾದಿ 2 ಜನ ಸೇರಿ ಅವರ ಎಸ್ ಬಿ ಐ ಖಾತೆಯಿಂದ ದಿಃ 4.9.2015 ರಂದು 9 ಲಕ್ಷ ರೂ. ಗಳನ್ನು ವರ್ಗಾವಣೆ ಮಾಡಿರಬಹುದು. ಒಟ್ಟು 38 ಲಕ್ಷ ರೂ. ಗಳನ್ನು ಜಮಾ ಆಗಿದ್ದನ್ನು ನನ್ನ ಗಂಡ ಸದರಿ ಹಣವನ್ನು ಮಾಲಿಕರಿಗೆ ಕೊಟ್ಟು ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಿಜ ಸಂಗತಿ ಗೊತ್ತಾಗುತ್ತದೆ ಎಂದು ಮತ್ತು ಮೇಲೆ ಹೇಳಿದ ವ್ಯವಹಾರ ನಿಪಿ.30 ರ ಮುಂದಿನ ಭಾಗದಲ್ಲಿ ಇದ್ದರೂ ಸಹ ಅದನ್ನು ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಸತ್ಯಾಂಶ ಗೊತ್ತಾಗುತ್ತದೆ ಅಂತಾ ಉದ್ದೇಶಪೂರ್ವಕವಾಗಿ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಸ್ವಂತ ಆಸ್ತಿ ಅಂತಾ ಗೊತ್ತಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕ್ರಮ ಸಂಖ್ಯೆಃ 4, ಶೆಡ್ಯೂಲ್-ಬಿ ಆಸ್ತಿ ಮೋತಿಲಾಲಸಾ ವಿಠಲಸಾ ಪಟ್ಟಣ ರವರಿಂದ ಖರೀದಿ ಮಾಡಿದಂತಹ ಆಸ್ತಿ ಪ್ರತಿವಾದಿ ನಂಃ 4 ರವರ ಸ್ವಯಾರ್ಜಿತ ಆಸ್ತಿ, ಅದರಲ್ಲಿ ನಮ್ಮದು ಯಾವುದೇ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿ 4 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಂತಾ ಗೊತ್ತಿದ್ದರೂ ಸುಳ್ಳು ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ.

**ಪ್ರತಿವಾದಿ 7, 8 ಹಾಗೂ 10 ರವರು ಗೈರು ಹಾಜರಾಗಿರುವುದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.